# ರೈತನ ತೇರು



ಮಂಜುನಾಥ ಹುಲಕೊಪ್ಪದ

ತೇರನೆಳೆಯುವಾ ನಾವು
ತೇರನೆಳೆಯುವಾ...
ರೈತ ಕೂತ ತೇರನೆಳೆದು
ಪ್ರಗತಿ ಪಥದಿ ಸಾಗುವಾ

ಸೂರ್ಯ ಚಂದ್ರ ತಾರೆಯಂತೆ
ಧರೆಯ ಸೊಗಸು ಅರಳಲಿ
ಹಸಿರು ಮುಡಿದ ವನಿತೆ
ನಿನ್ನ ಭಾಗ್ಯ ಕಂಡು ಹರಸಲಿ

ಜೋಡಿ ಎತ್ತು, ನೇಗಿಲ ಹೊತ್ತು
ಹೊಲದಿ ದುಡಿಮೆ ಸಾಗಲಿ
ಮಧುರವಾದ ಸಿಹಿಯ ತುತ್ತು
ನಿನ್ನ ಸ್ಮರಿಸಿ ಉಣ್ಣಲಿ

ನೆಲದೊಳಗಿನ ಬೀಜ ಮೊಳಕೆ
ಜಗದ ಬೆಳಕು ಕಾಣಲಿ
ನೋವನುಂಡ ಮನಕೆ
ಸ್ವರ್ಗ ಸುಖವ ತೆರೆಯಲಿ

ಸಾವಯವದ ಸುಗ್ಗಿ ಕಂಡ
ಛಲದ ರೈತ ನೀನೇ ಆಗು
ಗೆಲುವಿನಲ್ಲಿ ನೋವನುಂಡ
ಶಕ್ತಿವಂತ ನೀನೇ ದೇವರು

ತೇರನೆಳೆಯುವಾ ನಾವು
ತೇರನೆಳೆಯುವಾ...
ರೈತ ಕೂತ ತೇರನೆಳೆದು,
ಪ್ರಗತಿ ಪಥದಿ ಸಾಗುವಾ...
ತೇರನೆಳೆಯುವಾ ನಾವು
ತೇರನೆಳೆಯುವಾ....

■ **ದತ್ತಾತ್ರಯ ಭಟ್ಟ, ಕಣ್ಣಿಪಾಲ್**

# ಬೆಕ್ಕಿಗೆ ಕಟ್ಟಿದ ಗಂಟೆ

■ **ಮೈಲಾರಪ್ಪ ಬೂದಿಹಾಳ**

ಹಸಿವಿನಿಂದ ಕುಳಿತ ಬೆಕ್ಕು
ಅಜ್ಜಿ ಮನೆಯ ಹುಡುಕಿತು
ಕಣ್ಣುಕಾಣದೆಂದು ತಿಳಿದು
ಅಜ್ಜಿ ಮನೆಯ ಹೊಕ್ಕಿತು

ಹಾಲು ಕುಡಿದು ಮೊಸರು ನೆಕ್ಕಿ
ಮೀಸೆಯನ್ನು ತಿರುವಿತು
ದಿನಾ ಸಿಗುವುದೆಂದು ಕುಣಿದು
ಮೆಲ್ಲನೆ ಹಾದಿ ಹಿಡಿಯಿತು

ದಿನವೂ ಹೀಗೆ ಮಾಡಲು ಬೆಕ್ಕು
ಅಜ್ಜಿ ಕೋಪವ ತಾಳಿದಳು
ಪಕ್ಕದ ಮನೆಯ ಪುಟ್ಟನ ಕರೆದು
ಬೆಕ್ಕಿನ ಉಪಟಳ ಹೇಳಿದಳು

ಪುಟ್ಟಗೆ ಥಟ್ಟನೆ ಉಪಾಯ ಹೊಳೆಯಲು
ಬೆಕ್ಕಿಗೆ ಗಂಟೆ ಕಟ್ಟಿದನು
ಅಜ್ಜಿಗೊಂದು ಗುಟ್ಟನು ಹೇಳಿ
ಮೆಲ್ಲನೆ ಮನೆ ಕಡೆ ಓಡಿದನು

ಹಸಿದ ಬೆಕ್ಕು ಮನೆಯೊಳಗಡೆ ಬರಲು
ಗಂಟೆಯ ಶಬ್ದ ಕೇಳಿಸಿತು
ಅಜ್ಜಿಯ ಬೆತ್ತದ ರುಚಿಯ ತಿಂದು
ಎದ್ದು ಬಿದ್ದು ಓಡಿತು...

■

# ಪರೀಕ್ಷೆ ನಮಗೆ ಯಾಕಮ್ಮ

ಪರೀಕ್ಷೆ ನಮಗೆ ಯಾಕಮ್ಮ
ಭಯ ನಮಗ್ಯಾಕೆ ಹೇಳಮ್ಮ
ಅಂಕದ ಸೋಂಕು ಸಾಕಮ್ಮ
ಚಿಂತೆಯ ದೂರ ನೂಕಮ್ಮ

ಕಲಿತ ವಿದ್ಯೆಯ ಮನನವ ಮಾಡಿ
ಭಯ ಆತಂಕವ ದೂರದಿ ದೂಡಿ
ಓದು ಬರಹ ಒಟ್ಟಿಗೆ ಕೂಡಿ
ಜ್ಞಾನವ ವೃದ್ಧಿಯ ಮಾಡುವ ಮೋಡಿ

ಪರೀಕ್ಷೆ ಎಂಬುದು ಭಯವಲ್ಲ ಮಗುವೇ
ಸಿರಿ ಸಂಪತ್ತು ಸ್ಥಿರವಲ್ಲ ಅದುವೇ
ಇಷ್ಟದಿ ಕಲಿತರೆ ರಸಗುಲ್ಲಾ..
ಕಷ್ಟದಿ ಕಲಿತರೆ ಕಸ ಎಲ್ಲಾ ...

ವಿದ್ಯೆಯ ಮಾಪನ ಅಂಕವು ಅಷ್ಟೆ
ಹೋಲಿಕೆ ಲೇಪನ ಹಚ್ಚುವರಷ್ಟೆ
ಅಂಕವ ಪಡೆದರೆ ಮೆಚ್ಚುವರಷ್ಟೆ
ಚಿಂತಿಸಿ ಕುಳಿತರೆ ತಣ್ಣೀರ್ ಬಟ್ಟೆ

ಚಿಂತೆಯ ಚಿತವನು ದೂರ ದೂಡು
ಚಿತೆಯನು ಸುಡುವುದು ಚಿಂತೆಯ ಜಾಡು
ಎದೆಗುಂದದೆ ನೀ ಎದುರಿಸಿ ನೋಡು
ಕಟ್ಟುವೆ ಆಗ ಜ್ಞಾನದ ಗೂಡು

■ **ಸಮುದ್ರವಳ್ಳಿ ವಾಸು**
**ಹಾಸನ**



ವಿಜಯಕುಮಾರಿ